ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕೊಪ್ಪಳ.

**ಸಿಸಿಃ ನಂಃ 1007 ಃ2018**

| | |
|---|---|
| **ಸಿಡಬ್ಲ್ಯೂಃ 13** | **ಪಿಡಬ್ಲ್ಯೂಃ 10** |
| **ಸಾಕ್ಷಿದಾರನ ಹೆಸರು** | ಸರೋಜಮ್ಮ |
| **ತಂದೆ/ಗಂಡ/ತಾಯಿ ಹೆಸರು** | ಯಮನಪ್ಪ |
| **ವಯಸ್ಸು** | **40 ವರ್ಷ** |
| **ಉದ್ಯೋಗ** | ಕೂಲಿ |
| **ವಾಸಸ್ಥಳ** | **ಗುನ್ನಾಳ** |
| **ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು** | **ದಿನಾಂಕಃ 05-03-2024** |

**ಮುಖ್ಯ ವಿಚಾರಣೆ ಃ ಸ.ಸ.ಅ. ಅವರಿಂದ**

ನನಗೆ ಚಾಸ-**7** ರಿಂದ **12** ಮತ್ತು **15** ರಿಂದ **18** ರವರ ಪರಿಚಯ ಇರುತ್ತದೆ. ಸುಮಾರು **6** ವರ್ಷಗಳ ಹಿಂದೆ ಸಂಜೆ **07.30** ರ ಸುಮಾರಿಗೆ ನಾನು ಮತ್ತು ಚಾಸಾ **1, 8** ರಿಂದ **12, 14** ರಿಂದ **18** ರವರು ಆಟೋದಲ್ಲಿ ಒಣಬಳ್ಳಾರಿಯಿಂದ ಸಂಗಾಪೂರಕ್ಕೆ ಹೊಗುತ್ತಿರುವಾಗ ಹಟ್ಟಿ ಕ್ರಾಸ್ ಬಳಿ ಒಂದು ಬಲೇರೊ ವಾಹನವು ಅತೀವೇಗವಾಗಿ ಮತ್ತು ಅಲಕ್ಷತನದಿಂದ ಓವರ್ ಟೇಕ್ ಮಾಡಲು ಬಂದು ಆಟೋದ ಹಿಂಭಾಗದ ಬಲಭಾಗಕ್ಕೆ ಟಕರ್ ಕೊಟ್ಟು ಅಪಘಾತ ಪಡಿಸಿರುತ್ತದೆ.

ಸದರಿ ಅಪಘಾತದಿಂದ ಆಟೋ ರಿಕ್ಷಾ ಬಲಭಾಗದಲ್ಲಿ ಪಲ್ಟಿಯಾಗಿ ಬಿದ್ದು, ಪಲಿಕೆಮ್ಮ ಎಂಬ ಮಗುವಿನ ತಲೆಗೆ, ನನಗೆ ಬೆನ್ನು ಮತ್ತು ಕಾಲಿಗೆ ಪೆಟ್ಟುಗಳಾಗಿದ್ದವು. ಚಾಸಾ **9** ಮತ್ತು **12** ರವರಿಗೆ ಕೈ ಮುರಿದಿರುತ್ತದೆ. ಚಾಸಾ **11** ರವರಿಗೆ ತಲೆಗೆ ಮತ್ತು ಬೆನ್ನಿಗೆ ಪೆಟ್ಟಾಗಿತ್ತು. ಚಾಸಾ **10** ರವರಿಗೆ ಮೊಣಕಾಲಿಗೆ ಪೆಟ್ಟಾಗಿತ್ತು. ಚಾಸಾ **15, 16** ಹಾಗೂ **18** ರವರಿಗೆ ತಲೆಗೆ ಸಹ ಪೆಟ್ಟಾಗಿತ್ತು ಹಾಗೂ ಇತರೇ ಸವಾರರಿಗೂ ಸಹ ರಕ್ತಗಾಯವಾಗಿತ್ತು.

ನಂತರ ನಮ್ಮನ್ನು ಅಂಬುಲೆನ್ಸ ನಲ್ಲಿ ಜಿಲ್ಲಾ ಆಸ್ಪತ್ರೆ ಕೊಪ್ಪಳಕ್ಕೆ ತಂದು ಚಿಕಿತ್ಸೆ ನೀಡಿರುತ್ತಾರೆ. ಸದರಿ ಅಪಘಾತಕ್ಕೆ ಸಂಬಂಧಿಸಿದಂತೆ ನಾನು ಪೋಲಿಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ಅಪಘಾತವು ಬಲೇರಾ ವಾಹನದ ತಪ್ಪಿನಿಂದ ಆಗಿದ್ದು, ಅದರ ಚಾಲಕನ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಅಪಘಾತದ ನಂತರ ವಾಹನ ಚಾಲಕ ಓಡಿ ಹೋಗಿರುತ್ತಾನೆ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ಅವರು **ಸದರಿ ಸಾಕ್ಷಿಯನ್ನು** ಭಾಗಶಃ **ಪ್ರತೀಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡುವಂತೆ** ಕೋರಿಕೊಂಡಿದ್ದು, **ಆಲಿಸಿ** ಅನುಮತಿ **ನೀಡಲಾಯಿತು**).

**ಪಾಟೀಸವಾಲು ಃ ಸ.ಸ.ಅ. ಅವರಿಂದ ಃ**

ಸಾಕ್ಷಿಗೆ ನಾಯಾಲಯದ ಮುಂದೆ ಇರುವ ಆರೋಪಿಯನ್ನು ತೋರಿಸಿ ವಾಹನದ ಚಾಲಕನು ಆಗಿದ್ದನು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಬಲೆರಾ ವಾಹನದ ಸಂಖ್ಯೆಃ ಕೆಎ 37/ಎ 8222 ಆಗಿರುತ್ತದೆ ಎಂದರೆ ಸರಿ. ಸದರಿ ವಿಷಯದ ಬಗ್ಗೆ ನನ್ನ ಪುರವಣೆ ಹೇಳಿಕೆಯಲ್ಲಿ ಹೇಳಿರುತ್ತೇನೆ ಎಂದರೆ ಸರಿ.

**ಪಾಟೀಸವಾಲು ಃ ಆರೋಪಿ ಪರ ವಕೀಲರಿಂದ**

**ಆರೋಪಿ ಪರ ವಕೀಲರು** ಸಮಯಕಾಶ ಕೋರಿದ್ದು**,** ಯಾವುದೇ ಸಮಂಜಸ ಕಾರಣ ಇಲ್ಲದ ಕಾರಣ

**ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರುವಿಚಾರಣೆ ಇಲ್ಲಾ.**

**(ಇಂದು ದಿನಾಂಕ 05-03-2024 ರಂದು ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ. ಹೇ. ಕೇ. ಸರಿ ಇದೆ.**

ಹೆಚ್ಚುವರಿ **ಪ್ರ ದ ನ್ಯಾ ದಂ ಗಳು,**
ಕೊಪ್ಪಳ.